<u>ದಿನಾಂಕಃ 26-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. **N.D** ವಕೀಲರಿಂದಃ</u>

1. ನನ್ನ ಸ್ವಂತ ಊರು ಕೂಡ್ಲಿಗೆ ತಾಲೂಕಿನ ಸಾಸಲವಾಡ ಆಗಿರುತ್ತದೆ. ನಾನು ಈ ದಿನ ನ್ಯಾಯಾಲಯಕ್ಕೆ ಅಲ್ಲಿಂದಲ್ಲೆ ಬಸ್ ನಲ್ಲಿ ಸಾಕ್ಷಿ ಹೇಳಲು ಬಂದಿರುತ್ತೇನೆ. ಬಸ್ ಸ್ಟ್ಯಾಂಡ್ ನಿಂದ ನಡೆದುಕೊಂಡೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಡಿಗ್ರಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೊದಲು ಹೆರಿಟೇಜ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದೆ. ಅಪಘಾತ ಆದ ನಂತರವೂ ನಾನು ಅದೇ ಡೈರಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅಪಘಾತಕ್ಕಿಂತ ಮೊದಲು ಹೆರಿಟೇಜ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಐಡಿ ಕಾರ್ಡ ಹಾಜರು ಪಡಿಸಿರುತ್ತೇನೆ. ಅಪಘಾತ ಆದ ನಂತರವೂ ನಾನು ಸದರಿ ಹೆರಿಟೇಜ್ ಸಂಸ್ಥೆಯಲ್ಲಿಯೇ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅಲ್ಲಿಯೇ ಕೆಲಸ ಮಾಡುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-13 ದಾಖಲೆಯನ್ನು ನಾನೇ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ರಾಜಿನಾಮೆ ನೀಡಿದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ.

2. ಹೆರಿಟೇಜ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ ಇ ಎಸ್ ಐ ಅನ್ವಯವಾಗುತ್ತಿತ್ತು ಎಂದರೆ ಸರಿ. ನನ್ನ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಇ ಎಸ್ ಐ ರವರು ನೀಡಿದ್ದರು ಎಂದರೆ ಸರಿಯಲ್ಲ. ಇ ಎಸ್ ಐ ಯಿಂದ ಹಣ ಕ್ಲೈಮ್ ಮಾಡಿಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಹೆರಿಟೇಜ್ ಕಂಪನಿಯಲ್ಲಿ ತಿಂಗಳಿಗೆ ರೂ.40 ಸಾವಿರ ಸಂಬಳ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ನಾನು ಅಪಘಾತದ ದಿನ ನಮ್ಮ ಊರಿನಿಂದ ಕೊಟ್ಟೂರಿಗೆ ಹೋಗುತ್ತಿದ್ದೆ. ನನ್ನ ಜನ್ಮ ದಿನಾಂಕ 05-06-1999 ಆಗಿರುತ್ತದೆ. ನಾನು ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ನನ್ನ ಮಾವನಿಗೆ ಸಂಬಂಧಿಸಿದ್ದಾಗಿರುತ್ತದೆ. ಅಪಘಾತ ಕಾಲಕ್ಕೆ ನನ್ನ ಮೋಟಾರ್ ಸೈಕಲ್ ಗೆ ವಿಮೆ ಇರಲಿಲ್ಲ ಮತ್ತು ಫಿಟನೆಸ್ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಅಪಘಾತ ಕಾಲಕ್ಕೆ ಆ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ.

3. ಅಪಘಾತ ಆದ ಸ್ಥಳ ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ತಿರುವು ಇರುತ್ತದೆ ಎಂದು ಹೇಳುತ್ತಾರೆ. ಕೆ ಎ 17 ಡಿ 6149 ಮಿನಿ ಗೂಡ್ಸ ವಾಹನ ಕೊಟ್ಟೂರಿನಿಂದ ಕೂಡ್ಲಿಗಿ ಕಡೆಗೆ

ಹೋಗುತ್ತಿತ್ತು. ಈ ಅಪಘಾತ ಕೊಟ್ಟೂರಿನಿಂದ ಕೂಡ್ಲಿಗಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಅಪಘಾತದ ಗುರುತುಗಳು ರಸ್ತೆಯಲ್ಲಿ ಮೂಡಿರುತ್ತವೆ ಎಂದರೆ ಸರಿ. ನಿಪಿ-3 ಮಹಜರ್ ನಲ್ಲಿ ಅಪಘಾತ ಕೊಟ್ಟೂರಿನಿಂದ ಕೂಡ್ಲಿಗಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಆಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ . ಅಪಘಾತ ನನ್ನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಳ್ಳುವುದಕ್ಕಾಗಿ ಗೂಡ್ಸ ವಾಹನದ ಚಾಲಕನ ವಿರುದ್ದ ಸುಳ್ಳು ದೂರು ದಾಖಲಿಸಿ, ಸುಳ್ಳು ಅಂತಿಮ ವರದಿ ಸಲ್ಲಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತವಾದ ತಕ್ಷಣ ನಾನು ಕೊಟ್ಟೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ನನ್ನನ್ನು ಹೊಸಪೇಟೆಯ ಪುತ್ತೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ 2 ಕೈಗಳಿಗೆ ಆಪರೇಶನ್ ಮಾಡಿರುತ್ತಾರೆ. 2 ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದು ನಂತರ ವಾರಕ್ಕೊಮ್ಮೆ ಆಸ್ಪತ್ರೆಗೆ ಬರಲು ಹೇಳಿರುತ್ತಾರೆ. ದಿಃ 17-05-2024 ರಂದು ಆಸ್ಪತ್ರೆಗೆ ದಾಖಲಾಗಿ ಅದೇ ದಿನ ಬಿಡುಗಡೆ ಆಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಪರೇಶನ್ ಆಗದೆ ಇದ್ದರೂ ಸಹ ವೈದ್ಯರ ಜೊತೆ ಮಿಲಾಪೆಯಾಗಿ ಸುಳ್ಳು ಬಿಡುಗಡೆ ಪ್ರಮಾಣ ಪತ್ರ ಸೃಷ್ಠಿ ಮಾಡಿಕೊಂಡು ಬಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪುತ್ತೂರು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದ ನಂತರ ಬೇರೆ ಎಲ್ಲಿಯೂ ತೋರಿಸಿಲ್ಲ ಎಂದರೆ ಸಾಕ್ಷಿ ಎಸ್ ಎಸ್ ಐ ಆಸ್ಪತ್ರೆಯಲ್ಲಿ 2-3 ತಿಂಗಳಿನ ಹಿಂದೆ 2-3 ಬಾರಿ ತೋರಿಸಿರುತ್ತೇನೆ ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪುತ್ತೂರು ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಿ ಎಂದು ನಾನು ಕೇಳಿರುವುದಿಲ್ಲ. ಕೇಳಲು ಯಾವುದೇ ತೊಂದರೆ ಇರಲಿಲ್ಲ. ಪುತ್ತೂರು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಪುತ್ತೂರು ಆಸ್ಪತ್ರೆಯಲ್ಲಿಯೇ ನಾನು ತೋರಿಸುತ್ತಿದ್ದೇನೆ. ಆ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ.

5. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ತರಲು ಮಾತ್ರ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಹಣ ಪಾವತಿ ಮಾಡಿದ ಬಗ್ಗೆ ಎಲ್ಲಿಯೂ ನಮೂದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 11 ಮೆಡಿಕಲ್ ಬಿಲ್ ಗಳನ್ನು ಈ ಕೇಸ್ ಗೊಸ್ಕರ ಸೃಷ್ಠಿ ಮಾಡಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಾವು ಒಟ್ಟು ಇಬ್ಬರು ಸಹೋದರರು ಇದ್ದು, ನನ್ನ ತಮ್ಮ ಕೂಡ್ಲಿಗಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ , ನನ್ನ ತಂದೆ ತೀರಿಕೊಂಡಿರುತ್ತಾರೆ. ನಾನು ಮೊದಲಿನಂತೆ ಈಗಲೂ ಸಹ ಕೆಲಸ ಮಾಡುತ್ತಿದ್ದು ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಕೇಸ್ ಗೆ ಅನುಕೂಲವಾಗಲಿ

ಎಂದು ನಿಪಿ-19 ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಸೃಷ್ಠಿ ಮಾಡಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಸಹ ಹಾಲಿನ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಎಕ್ಸರೆ ಪಿಲ್ಮಗಳು ನನಗೆ ಸಂಬಂಧಪಟ್ಟವು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.